## ನಿಮ್ಮೊಡನೆ

# ಮಕ್ಕಳೇಕೆ ಕಣ್ಮರೆಯಾಗುತ್ತಾರೆ?

ಅಷ್ಟಕ್ಕೂ ಮಕ್ಕಳೇಕೆ ಇಷ್ಟೊಂದು ಸಂಖ್ಯೆಯಲ್ಲಿ ಮನೆ ಬಿಟ್ಟು ಹೋಗುತ್ತಾರೆ? ಹೋದ ಬಳಿಕ ಆದೆಲ್ಲಿ ಕಣ್ಮರೆಯಾಗುತ್ತಾರೆ?

‘ಮಕ್ಕಳ ಜತೆ ಮಾತನಾಡುವುದು ಹೇಗೆ..’ ಎನ್ನುವುದೇ ಇವತ್ತಿನ ಹೆತ್ತವರ ಬಹುದೊಡ್ಡ ಸಮಸ್ಯೆ ಎನ್ನುವಂತಿದೆ. ಕಳೆದ ವಾರ ಬೆಂಗಳೂರಿನ 13ರ ಹರೆಯದ ಪುಟ್ಟ ಬಾಲಕಿಯೊಬ್ಬಳು ಮನೆಯಿಂದ ಏಕಾಏಕಿ ಕಣ್ಮರೆಯಾದಳು! ‘ಶಾಲೆಯಲ್ಲಿ ಅಂಕ ಕಡಿಮೆ ಬಿದ್ದಿದೆ. ಸರಿಯಾಗಿ ಓದಿಕೋ..’ ಎಂದು ಹೆತ್ತವರು ಬುದ್ಧಿ ಹೇಳಿದ್ದೇ ಆ ಹುಡುಗಿ ಮನೆಬಿಟ್ಟು ಹೋಗಲು ಕಾರಣ! ಮನೆಯಲ್ಲಿ ಶಾಲೆಗೆಂದು ಸುಳ್ಳು ಹೇಳಿ ಪಡೆದಿದ್ದ ದುಡ್ಡಿನಿಂದ ರೈಲು ಹತ್ತಿ ಅಹ್ಮದಾಬಾದ್, ಮುಂಬೈ ಸುತ್ತಾಡಿ ಕೊನೆಗೂ ಬೆಂಗಳೂರಿಗೆ ವಾಪಸಾಗುವಾಗ ಹುಬ್ಬಳ್ಳಿಯಲ್ಲಿ ಪೊಲೀಸರು ಆಕೆಯನ್ನು ಪತ್ತೆ ಹಚ್ಚಿದ್ದಾರೆ. ಹೆತ್ತವರ ಪುಣ್ಯ, ಆಕೆ ದುಷ್ಟರ ಕೈಗೆ ಸಿಕ್ಕಿ ಬೀಳಲಿಲ್ಲ. ಎಲ್ಲ ಹೆತ್ತವರೂ ಅಂತಹ ಅದೃಷ್ಟವಂತರಲ್ಲ. ಏಕೆಂದರೆ ಬೆಂಗಳೂರಿನಲ್ಲಿ ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಮನೆಬಿಟ್ಟು ಕಣ್ಮರೆಯಾದ 184 ಮಕ್ಕಳ ಪೈಕಿ 99 ಮಕ್ಕಳು ಇನ್ನೂ ಪತ್ತೆಯೇ ಆಗಿಲ್ಲ. ಬುದ್ಧಿ ಸರಿಯಾಗಿ ಬಲಿಯದ ವಯಸ್ಸಿನಲ್ಲಿ ಕೋಪ ಅಥವಾ ಹತಾಶೆಯ ಕೈಗೆ ಮನಸ್ಸು ಕೊಟ್ಟು ಮನೆಬಿಡುವ ತೀರ್ಮಾನ ಕೈಗೊಳ್ಳುವ ಮಕ್ಕಳು, ಆ ಬಳಿಕ ಸ್ವಂತ ತೀರ್ಮಾನ ಕೂಡಾ ಕೈಗೊಳ್ಳಲು ಸಾಧ್ಯವಾಗದಂತಹ ದುಷ್ಟ ಜಾಲದಲ್ಲಿ ಸಿಕ್ಕುಬೀಳುವುದೇ ಹೆಚ್ಚು.

ಹೀಗೆ ಮನೆಬಿಟ್ಟು ಹೋಗುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ ಪ್ರತಿ ವರ್ಷ 3.25 ಲಕ್ಷ ಬಾಲಕ– ಬಾಲಕಿಯರು ಮನೆ ಬಿಟ್ಟು ಕಣ್ಮರೆಯಾಗುತ್ತಿದ್ದಾರೆ. ಅದರಲ್ಲೂ ಬಾಲಕಿಯರ ಪ್ರಮಾಣ ಶೇಕಡಾ 55ರಷ್ಟು! ಹೀಗೆ ಮನೆಬಿಟ್ಟು ಹೋದ ಮಕ್ಕಳಲ್ಲಿ ಸರಾಸರಿ ಶೇಕಡಾ 45ರಷ್ಟು ಬಾಲಕ– ಬಾಲಕಿಯರು ಪತ್ತೆಯಾಗುವುದೇ ಇಲ್ಲ!

ಮನೆಯಲ್ಲಿ ಮೂರು ಹೊತ್ತು ಊಟಕ್ಕೆ ಸಿಗುವುದಿಲ್ಲವಾದ್ದರಿಂದ ಅಥವಾ ಕಿತ್ತು ತಿನ್ನುವ ಬಡತನ ಇರುವುದರಿಂದ ಈ ಮಕ್ಕಳು ಹೀಗೆ ಕಣ್ಮರೆಯಾಗುತ್ತಿದ್ದಾರೆ ಎಂದು ಭಾವಿಸಿದ್ದರೆ ಖಂಡಿತ ತಪ್ಪು. ಅಂತಹ ಕಾರಣ ಇರುವ ಮಕ್ಕಳ ಸಂಖ್ಯೆ ತೀರಾ ಕಡಿಮೆ. ಕಾಣೆಯಾದವರಲ್ಲಿ ಶೇಕಡಾ 73ರಷ್ಟು ಮಕ್ಕಳು ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು! ನಮ್ಮ ಕುಟುಂಬ ವ್ಯವಸ್ಥೆ ತೀರಾ ಶಿಥಿಲಗೊಳ್ಳುತ್ತಿದೆ ಎನ್ನುವುದು ಸ್ಪಷ್ಟ. ಒಂದೆಡೆ ಹೆತ್ತವರ ಮೇಲಿನ ಬದುಕಿನ ಒತ್ತಡ ಹೆಚ್ಚಾಗುತ್ತಿದೆ. ಇನ್ನೊಂದೆಡೆ ಮಕ್ಕಳ ಮೇಲೆ ಕಲಿಯುವ ಒತ್ತಡ ಹೆಚ್ಚಾಗುತ್ತಿದೆ. ಹೆತ್ತವರು ತಮ್ಮ ಒತ್ತಡದ ಬಹುಪಾಲನ್ನು ಮಕ್ಕಳ ಮೇಲೆ ವರ್ಗಾಯಿಸಿದರೆ, ಮುಗ್ಧ ಮಕ್ಕಳಾದರೂ ಹೇಗೆ ಸಹಿಸಿಕೊಳ್ಳುವುದು?

ರಾಜ್ಯದಲ್ಲೂ ನಾಪತ್ತೆಯಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ. 2014ರಲ್ಲಿ ಬೆಂಗಳೂರಲ್ಲಿ ದಾಖಲಾದ ಒಟ್ಟು ನಾಪತ್ತೆ ಪ್ರಕರಣಗಳ ಸಂಖ್ಯೆ 5606 (ಹಿರಿಯರನ್ನೂ ಸೇರಿ). ಇದರಲ್ಲಿ ಪತ್ತೆಯಾದವರು 3240 ಮಾತ್ರ. 2015ರಲ್ಲಿ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗಿದ್ದು, ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ ಎನ್ನುತ್ತಾರೆ ಅಂಕಿ ಅಂಶ ತಜ್ಞರು.

ಬಹಳಷ್ಟು ಪ್ರಕರಣಗಳು ಪೊಲೀಸ್ ಠಾಣೆಯಲ್ಲಿ ದಾಖಲಾಗುವುದೇ ಇಲ್ಲ. ಅದರಲ್ಲೂ 14ರ ಆಸುಪಾಸಿನ ಹೆಣ್ಣುಮಕ್ಕಳು ನಾಪತ್ತೆ ಆದರಂತೂ ಹೆತ್ತವರ ಆತಂಕ ಮೇರೆ ಮೀರುತ್ತದೆ. ಕುಟುಂಬದ ಮರ್ಯಾದೆಯ ಪ್ರಶ್ನೆ ಎನ್ನುವ ಕಾರಣಕ್ಕಾಗಿ ಅಕ್ಕಪಕ್ಕದವರಲ್ಲಿ ‘ಊರಿಗೆ ಕಳಿಸಿದ್ದೇವೆ’ ಎಂದು ಸುಳ್ಳು ಹೇಳಿ, ಕೊನೆಗೆ ಮನೆ ಖಾಲಿ ಮಾಡಿ ಬೇರೆಡೆಗೆ ಹೋಗುವವರ ಸಂಖ್ಯೆಯೂ ದೊಡ್ಡದಿದೆ.

ಸಾಕಷ್ಟು ಕುಟುಂಬಗಳಲ್ಲಿ ಅಪ್ಪ– ಅಮ್ಮನ ನಡುವಣ ವಿರಸ, ಜಗಳಗಳು ಮಕ್ಕಳ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಿದೆ. ಜತೆಗೆ ಶಾಲೆಗಳಲ್ಲಿ ಹೆಚ್ಚುತ್ತಿರುವ ಅಂಕ ಗಳಿಸುವ ಸ್ಪರ್ಧೆಯ ಒತ್ತಡ. ಈ ಒತ್ತಡಗಳನ್ನು ಸಮರ್ಥವಾಗಿ ನಿಭಾಯಿಸುವುದನ್ನು ಹೇಳಿಕೊಡಲು ಹೆತ್ತವರಿಗೆ ಗೊತ್ತಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಕ್ಕಳಿಗೆ ಮೋಜು– ಮಜಾದ ಆಕರ್ಷಣೆ ಹೆಚ್ಚಿ ಮನೆ ಬಿಡುವುದೂ ಇದೆ.

ಮನೆ ಬಿಟ್ಟ ಕೆಲವು ಮಕ್ಕಳಲ್ಲಿ ಸ್ವಂತ ದುಡಿಮೆಯ ಭ್ರಮೆಯೂ ಇರುತ್ತದೆ ಎನ್ನುವುದು ಸುಳ್ಳಲ್ಲ. ಆದರೆ ಒಮ್ಮೆ ಮನೆ ಬಿಟ್ಟ ಬಳಿಕ ಸಮಾಜದಲ್ಲಿ ಸಿಗುವ ಕೆಲಸಗಳಲ್ಲಿ ಶೋಷಣೆಯೇ ಹೆಚ್ಚಿರುತ್ತದೆ. ಮನೆಯಿಂದ ಓಡಿಹೋಗಿ ಅನಿವಾರ್ಯವಾಗಿ ಮಿಲ್, ಬಾರ್– ಹೋಟೆಲ್‌ಗಳಲ್ಲಿ ಕೆಲಸಕ್ಕೆ ಸೇರುವ ಮಕ್ಕಳು ಅಧಿಕ ಕೆಲಸದೊತ್ತಡ ಮತ್ತು ಹೆತ್ತವರ ಪ್ರೀತಿಯಿಲ್ಲದೆ ನರಳುವುದೇ ಹೆಚ್ಚು. ನಮ್ಮ ಸಮಾಜ ಇತ್ತೀಚೆಗೆ ಎಷ್ಟು ಜಡ್ಡುಗಟ್ಟಿದೆಯೆಂದರೆ, ಹೀಗೆ ಮನೆಬಿಟ್ಟು ಹೋದ ಮಕ್ಕಳನ್ನು ಮರಳಿ ಮನೆಗೆ ಸೇರಿಸಿಕೊಳ್ಳುವ ಮನಸ್ಸೂ ಹೆತ್ತವರಲ್ಲಿ ಇಲ್ಲವಾಗುತ್ತಿದೆ. ಅರ್ಧಕ್ಕರ್ಧ ಪ್ರಕರಣಗಳಲ್ಲಿ ಮಕ್ಕಳೇ ಅವಮಾನದ ಭಯದಿಂದ ಮರಳಿ ಮನೆಗೆ ಬರಲು ಹಿಂಜರಿಯುತ್ತಾರೆ. ಹೆಣ್ಣು ಮಕ್ಕಳಾದರೆ ವೇಶ್ಯಾವಾಟಿಕೆಯ ಜಾಲಕ್ಕೆ ಸಿಕ್ಕುಬೀಳುವುದೇ ಹೆಚ್ಚು. ಕುಟುಂಬ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಪೋಷಕರು ಮತ್ತು ಸಾಮಾಜಿಕ ಸೇವಾ ಸಂಸ್ಥೆಗಳು ತುಂಬಾ ಸಕ್ರಿಯರಾಗುವ ಅಗತ್ಯ ಈಗ ಹಿಂದೆಂದಿಗಿಂತಲೂ ಹೆಚ್ಚಿದೆ.

■ ಬಿ.ಎಂ.ಹನೀಫ್

